CW : 8

PW : 6

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.61/2017

ಸಾಕ್ಷಿದಾರರ ಹೆಸರು : ಅಮೃತ ಪ್ರಸಾದ್

ತಂದೆಯ ಹೆಸರು : ಸೀತಾರಾಮ ರೈ

ಪ್ರಾಯ : 55 ವರ್ಷ

ಉದ್ಯೋಗ ಕೃಷಿ

ವಾಸಸ್ಥಳ : ಗುತ್ತು ಮನೆ, ಬೆಟ್ಟಂಪಾಡಿ

ದಿನಾಂಕಃ**03.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸುಮಾರು 10 ವರ್ಷಗಳ ಹಿಂದೆ ಫೆಬ್ರುವರಿ ತಿಂಗಳಲ್ಲಿ ನಾನು ಮನೆಯಿಂದ ಬೆಟ್ಟಂಪಾಡಿಯ ಅಂಗಡಿಗೆ ಬರುತ್ತಿದ್ದೆ. ಅಲ್ಲಿ ನಾನು ವಿನೋದನ ಅಂಗಡಿಗೆ ಸಾಮಾನು ತೆಗೆದುಕೊಳ್ಳಲು ಹೋದೆನು. ಅಲ್ಲಿದ್ದ ಬಸ್ ನಿಲ್ದಾಣದಲ್ಲಿ ಜನ ಸೇರಿದ್ದರು. ಬಸ್ ನಿಲ್ದಾಣದಲ್ಲಿದ್ದ ಒಂದು ಕಂಬಕ್ಕೆ ಬಿಳಿ ಕಾಗದವನ್ನು ಅಂಟಿಸಲಾಗಿತ್ತು. ಅದರಲ್ಲಿ ಅಶ್ಲೀಲ ಚಿತ್ರಗಳು ಇದ್ದವು. ಸದರಿ ಅಶ್ಲೀಲ ಚಿತ್ರಗಳು ಲೈಂಗಿಕ ಕ್ರಿಯೆಯನ್ನು ತೋರಿಸುವ ಚಿತ್ರಗಳಾಗಿದ್ದವು. ನಂತರ ಅಲ್ಲಿಗೆ ಪೋಲೀಸಿನವರು ಬಂದರು. ಸದರಿ ಚಿತ್ರದಲ್ಲಿ ನನ್ನ ಪರಿಚಯದವರಾದ ಪೂರ್ಣಿಮಾ ಎನ್ನುವವರ ಮುಖ ಇತ್ತು. ಅಲ್ಲಿ ಸೇರಿದ್ದ ಜನರಲ್ಲಿ ಒಬ್ಬ ವ್ಯಕ್ತಿ ನನಗೆ ಆ ಕಾಗದದಲ್ಲಿ ಇರುವ ಮಹಿಳೆ ನನ್ನ ಸಂಬಂಧಿಕರು ಎಂದು ಹೇಳಿದರು. ನಂತರ ಪೋಲೀಸರು ಸ್ಥಳಕ್ಕೆ ಬಂದು ಮಹಜರು ಮಾಡಿದರು. ನನ್ನ ಸಹಿ ಪಡೆದರು. ಅಶ್ಲೀಲ ಚಿತ್ರಗಳಿದ್ದ ಭಾವಚಿತ್ರವನ್ನು ಪೋಲೀಸರು ಕಿತ್ತುಕೊಂಡು ತಮ್ಮ ಜೊತೆಗೆ ತೆಗೆದುಕೊಂಡು ಹೋದರು. ಮಹಜರಿಗೆ ವಿನೋದ ಮತ್ತು ನಾನು ಸಹಿ ಮಾಡಿದ್ದೇವೆ. ಘಟನೆಗೆ ಸಂಬಂಧಿಸಿದಂತೆ ಪೋಲೀಸರು ನನ್ನನ್ನು 2 ಬಾರಿ ವಿಚಾರಣೆ ಮಾಡಿದ್ದಾರೆ. ಸದರಿ ಅಶ್ಲೀಲ ಚಿತ್ರವಿದ್ದ ಪತ್ರವನ್ನು ಯಾರು ಅಂಟಿಸಿದ್ದರು ಎಂದು ನನಗೆ ಗೊತ್ತಾಗಿಲ್ಲ. ಸ್ಥಳಕ್ಕೆ ಈ ದಿನ ನ್ಯಾಯಾಲಯದ ಸಮಕ್ಷಮ ಹಾಜರಿರುವ ವ್ಯಕ್ತಿಗಳನ್ನು ಕರೆದುಕೊಂಡು ಬಂದಿದ್ದರು.

2. ನನ್ನ ಸಮಕ್ಷಮ ತಯಾರಿಸಿದ ಮಹಜರನ್ನು ಹಾಗೂ ಅದರಲ್ಲಿನ ನನ್ನ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-9

ಎಂದು ಗುರುತಿಸಲಾಗಿದ್ದ ಸಹಿಯನ್ನು ನಿಪಿ-9 ಬಿ ಎಂದು ಗುರುತಿಸಲಾಯಿತು. ಕಂಬಕ್ಕೆ ಅಂಟಿಸಲಾಗಿದ್ದ ಅಶ್ಲೀಲ ಚಿತ್ರಗಳಿದ್ದ ಪತ್ರವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಸದರಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದೆ. ಆ ದಿನ ಪೋಲೀಸರು ಕರೆದುಕೊಂಡು ಬಂದಿದ್ದ ಇಬ್ಬರು ವ್ಯಕ್ತಿಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಸಮಕ್ಷಮ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಃ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>**

ಘಟನೆ ನಡೆಯುವ 8 ತಿಂಗಳ ಹಿಂದೆ ಪೂರ್ಣಿಮಾರವರ ವಿವಾಹ ಪುತ್ತೂರು ನಗರ ಸಭೆಯಲ್ಲಿ ಕೆಲಸ ಮಾಡುವ ಲೋಕೇಶ ಎನ್ನುವವರೊಟ್ಟಿಗೆ ನೆರವೇರಿತ್ತು ಎಂದರೆ ಸರಿ. ಮದುವೆಯ ನಂತರ ಬೇರೆ ಬೇರೆ ದಿನಾಂಕದಂದು ಬೇರೆ ಬೇರೆಯವರ ಹೆಸರಿನಲ್ಲಿ ಅಂಚೆ ಮೂಲಕ ಲೋಕೇಶರವರ ಕಚೇರಿಗೆ ಪೂರ್ಣಿಮಾರವರ ಬಗ್ಗೆ ಇಲ್ಲಸಲ್ಲದ ವಿಷಯಗಳನ್ನು ಬರೆದ ಪತ್ರಗಳನ್ನು, ಸಿಡಿ ಮತ್ತು ಮೆಮೋರಿ ಕಾರ್ಡ್‌ಗಳಲ್ಲಿ ಹುಡುಗ ಮತ್ತು ಹುಡುಗಿ ಇರುವ ಅಶ್ಲೀಲ ಚಿತ್ರವನ್ನು ಕಳುಹಿಸಿದ್ದು ಸಿಡಿ ಮತ್ತು ಮೆಮೋರಿ ಕಾರ್ಡ್‌ನಲ್ಲಿ ಕಾಣುವ ಹುಡುಗಿಯ ಮುಖಭಾಗಕ್ಕೆ ಪೂರ್ಣಿಮಾ ಹೋಲುವ ಭಾವಚಿತ್ರವನ್ನು ಬಿಂಬಿಸಿರುವುದಾಗಿ ಲೊಕೇಶ್ ತಿಳಿಸಿರುತ್ತಾರೆ ಎಂದರೆ ಸರಿ. ನಂತರ ಘಟನಾ ದಿನದ ಹಿಂದಿನ ದಿನ ಯಾರೋ ಫೋನ್ ಮಾಡಿ ವಾಲ್‌ಪೋಸ್ಟರ್ ಹಾಕಿದ್ದೇವೆ ಎಂದು ನನಗೆ ಲೊಕೇಶ್ ತಿಳಿಸಿದ್ದರು ಎಂದರೆ ಸರಿಯಲ್ಲ. ಸದರಿ ಕೃತ್ಯಗಳನ್ನೆಲ್ಲಾ ಗಣೇಶ್ ಎನ್ನುವವರು ಮಾಡಿದ್ದಾರೆ ಎಂದು ಲೊಕೇಶ್ ಹೇಳಿದ ಕಾರಣ ತಿಳಿದುಬಂದಿರುತ್ತದೆ. ಫೋನ್ ಮಾಡಿದ ವ್ಯಕ್ತಿ ತಿಮ್ಮಪ್ಪ ಎಂದೂ ಕೂಡಾ ಲೊಕೇಶ್ ತಿಳಿಸಿದ ಕಾರಣ ಗೊತ್ತಾಗಿರುತ್ತದೆ.

<u>ಪಾಟೀ ಸವಾಲುಃ **1** ನೇ ಆರೋಪಿತರ ಪರ ಶ್ರೀ ಡಿ ಪಿ ಆರ್ ವಕೀಲರಿಂದಃ</u>

ಸಂಪ್ಯ ಪೋ. ಠಾಣೆಯ ಸುಮಾರು ಪ್ರಕರಣಗಳಲ್ಲಿ ನಾನು ಸಾಕ್ಷ್ಯ ಹೇಳಲು ಬಂದಿದ್ದೇನೆ ಎಂದರೆ ಸರಿ. ಅನೇಕ ಜನರಿಗೆ ನಾನು ದಾಖಲೆ ಪತ್ರ ನೀಡಿ ಜಾಮೀನು ನೀಡಿದ್ದೇನೆಂದರೆ ಸರಿ. ಸಂಪ್ಯ ಪೋ. ಠಾಣೆಯ ಬಹುತೇಕ ಎಲ್ಲಾ ಪೋಲೀಸರ ಪರಿಚಯ ನನಗೆ ಇದೆ ಎಂದರೆ ಸರಿ. ಈ ಕೇಸಿನ ಸಲುವಾಗಿ

ಪೋಲೀಸರು ನನ್ನ ವಿಚಾರಣೆ ಮಾಡಿಲ್ಲ. ಮಹಜರು ಮಾಡಿದ ಸ್ಥಳದ ಸರಿಯಾದ ಚೆಕ್ಕುಬಂದಿಯನ್ನು ಪ್ರಸ್ತುತ ಹೇಳಲು ಆಗುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಯಾರೋ ಒಬ್ಬ ವ್ಯಕ್ತಿಯ ಹೆಸರು ಈಗ ಹೇಳಲಾಗುವುದಿಲ್ಲ. ಆ ವ್ಯಕ್ತಿಯ ಹೆಸರನ್ನೂ ಕೂಡಾ ನಾನು ಪೋಲೀಸರಿಗೆ ತಿಳಿಸಿಲ್ಲ. ಮಹಜರಿಗೆ ಎಷ್ಟು ಜನ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮಹಜರು ಕಾಲದಲ್ಲಿ ನಾನು ಆರೋಪಿಗಳನ್ನು ನೋಡಿದ್ದೆನು. ಅವರ ಸಹಿಗಳನ್ನು ಮಹಜರಿಗೆ ಪೋಲೀಸರು ಪಡೆದಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಎಷ್ಟು ಜನ ಪೋಲೀಸರು ಸ್ಥಳದಲ್ಲಿ ಹಾಜರಿದ್ದರು ಎಂದು ಈಗ ಹೇಳಲು ಆಗುವುದಿಲ್ಲ. ಮಹಜರನ್ನು ಪೋಲೀಸರು ಬರೆದರು. ಅವರು ಯಾರು ಎಂದು ನನಗೆ ಈಗ ಹೇಳಲಾಗುವುದಿಲ್ಲ. ಮಹಜರು ಎಷ್ಟು ಪುಟಗಳದ್ದು ಎಂದು ಸಹ ನನಗೆ ಗೊತ್ತಿಲ್ಲ. ಈ ಕೇಸಿನ ಸಲುವಾಗಿ ನಾನು ಒಮ್ಮೆ ಮಾತ್ರ ಪೋ.ಠಾಣೆಗೆ ಹೋಗಿದ್ದೇನೆ, ಅದು ಯಾವತ್ತು ಎಂದು ಗೊತ್ತಿಲ್ಲ. ನಾನು ಪೋ. ಠಾಣೆಗೆ ಹೋದಾಗ ಅಲ್ಲಿ ಪೊಲೀಸರು ನನ್ನ ಸಹಿ ಪಡೆದಿಲ್ಲ.

2. ನಾನು ಹೇಳಿದಂತೆ ಪೋಲೀಸರು ಸ್ಥಳ ಮಹಜರು ಮಾಡಿಲ್ಲ ಹಾಗೂ ನಾನು ಸ್ಥಳದಲ್ಲಿ ಮಹಜರಿಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನ ಪರಿಚಯಸ್ಥರಾದ ಕಾರಣ ಅವರಿಗೆ ಸಹಾಯ ಮಾಡುವ ರೀತಿಯಲ್ಲಿ ಮಹಜರು ಸಂಬಂಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ಮಹಜರು ಮುಖೇನ ಯಾವುದೇ ವಸ್ತುಗಳನ್ನು ತಮ್ಮ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಮಹಜರಿಗೆ ಪೋ. ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಲೋಕೇಶ್ ಎನ್ನುವವರು ಕೆಲವು ವಿಚಾರಗಳನ್ನು ಎಲ್ಲಿ ಸಿಕ್ಕಿ ಯಾವ ದಿನಾಂಕದಂದು ತಿಳಿಸಿದರು ಎಂದು ನನಗೆ ನೆನಪಿಲ್ಲ. ಲೊಕೇಶ್ ಹೊರತುಪಡಿಸಿ ಬೇರೆ ಯಾವ ವ್ಯಕ್ತಿಯೂ ಕೂಡಾ ಯಾವ ವಿಚಾರವನ್ನು ತಿಳಿಸಿಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **2** ನೇ ಆರೋಪಿತರ ಪರ ಶ್ರೀ ಡಿ ಕೆ ವಕೀಲರಿಂದಃ</u>

ನ್ಯಾಯಾಲಯದ ಸಮಕ್ಷಮ ಹಾಜರಿರುವ ವ್ಯಕ್ತಿಗಳ ಹೆಸರು ಮತ್ತು ವಿಳಾಸ ಗೊತ್ತಿಲ್ಲ. ಬಸ್ ನಿಲ್ದಾಣದಲ್ಲಿ ಎಷ್ಟು ಕಾಗದಗಳನ್ನು ಅಂಟಿಸಲಾಗಿತ್ತು ಎಂದು ಹೇಳಲಾಗುವುದಿಲ್ಲ, ಕಾಗದಗಳ ಉದ್ದ ಮತ್ತು ಅಗಲಗಳನ್ನು ಕೂಡಾ ಹೇಳಲಾಗುವುದಿಲ್ಲ. ಒಂದೊಂದು ಕಾಗದದಲ್ಲಿ 3-4 ಚಿತ್ರಗಳು ಇದ್ದವು. ಅವು ಜೆರಾಕ್ಸ್ ಕಾಗದ ಪತ್ರಗಳಾಗಿದ್ದವು. 2 ನೇ ಆರೋಪಿ ಯಾವುದೇ ಅಪರಾಧಿಕ ಕೃತ್ಯಗಳನ್ನು ನಡೆಸಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯನ್ನು ಇದೇ ಪ್ರಪ್ರಥಮವಾಗಿ ನ್ಯಾಯಾಲಯದಲ್ಲಿ

ನೋಡುತ್ತಿದ್ದೇನೆಂದರೆ ಸರಿ. (2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರು ನಡೆಸಿದ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.